# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಮಳವಳ್ಳಿ

## ಸಿಸಿ.ನಂಃ1255/2015

ಫಿರ್ಯಾದುದಾರರು ಃ ಜಿ.ಕೃಷ್ಣಮೂರ್ತಿ

- ವಿರುದ್ದ -

ಆರೋಪಿ ಃ ಎಂ.ವಿ.ಅನುರಾಧ

### ದಂಡ ಪ್ರಕ್ರಿಯ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ ಃ 1) ನೀವು ಇದುವರೆಗೂ ನ್ಯಾಯಾಲಯದಲ್ಲಿ ನಡೆದ ಸಾಕ್ಷಿಯ ವಿಚಾರಣೆಯನ್ನು ಕೇಳಿದ್ದೀರಾ ?

ಉತ್ತರ ಃ-

ಪ್ರಶ್ನೆ ಃ2) ಫಿರ್ಯಾದುದಾರರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ತನ್ನ ಪರಿಚಯಸ್ಥರಾಗಿದ್ದು ಹಣದ ಅವಶ್ಯಕತೆ ಇದ್ದ ಕಾರಣ ನೀವು ಮಲ್ಲಿಕ್ಯಾತನಹಳ್ಳಿ (ಬ್ಲಫ್)ಗೆ ಬಂದು ಅವರನ್ನು ಭೇಟಿ ಮಾಡಿ ಹಣ ಕೇಳಿದ್ದರಿಂದ ನಾನು ಅವರಿಗೆ ಹಣ ಕೊಡಲು ಒಪ್ಪಿಕೊಂಡಿದ್ದು ದಿನಾಂಕಃ16.05.2013 ರಂದು ರೂ.4,00,000 (ನಾಲ್ಕು ಲಕ್ಷಗಳು)ಗಳನ್ನು ನಿಮ್ಮ ಕಾನೂನು ಬದ್ಧ ಅವಶ್ಯಕತೆಗಳಿಗಾಗಿ ಎರಡು ತಿಂಗಳ ಒಳಗೆ ವಾಪಸ್ ನೀಡುತ್ತೇನೆ ಎಂದು ನೀವು ಹೇಳಿದ್ದರಿಂದ ನಿಮ್ಮಿಂದ ಇದಕ್ಕೆ ಸಂಬಂಧಿಸಿದಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಲೈ ಮಹದೇಶ್ವರ ಶಾಖೆ, ಚಾಮರಾಜನಗರ ಜಿಲ್ಲೆಗೆ ಸೇರಿದ ಚೆಕ್ ನಂಃ901927 ರ ಖಾತೆ ನಂಃ54032604981 ನ್ನು ನೀಡಿ ದಿನಾಂಕಃ17-07-2013 ಕ್ಕೆ ಹಣವನ್ನು ನಗದೀಕರಿಸಿಕೊಳ್ಳುವಂತೆ ಹೇಳಿ ಅವರಿಂದ ಹಣ ಪಡೆದಿರುತ್ತೀರಿ ಎಂದ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಚಿಸುತ್ತೀರಾ?

ಉತ್ತರಃ

ಪ್ರಶ್ನೆಃ 3) ಫಿರ್ಯಾದುದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಒಪ್ಪಿಕೊಂಡಂತೆ ಹಣ ಹಿಂದಿರುಗಿಸದ ಕಾರಣ ದಿನಾಂಕಃ15-07-2013 ರಂದು ಪುನಃ ಭೇಟಿ ಮಾಡಿ ಹಣ ಮರುಪಾವತಿಗಾಗಿ ಕೇಳಿದಾಗ ಸದರಿ ಚೆಕ್ಕನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಶಿವನಸಮುದ್ರಂ (ಬ್ಲಫ್)ನಲ್ಲಿ ಹಾಜರುಪಡಿಸಿದರೂ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ಅಮಾನ್ಯಗೊಂಡಿದ್ದು ದಿನಾಂಕ 19-07-2013 ರಂದು ಬ್ಯಾಂಕಿನವರು ಹಿಂಬರಹ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರು ಹೇಳಲು ಇಚ್ಚಿಸುವಿರಾ?

ಉತ್ತರಃ

**ಪ್ರಶ್ನೆಃ4) ಫಿರ್ಯಾದುದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 16-08-2013 ರಂದು ನಿಮಗೆ ನೋಟೀಸ್ ಜಾರಿಗೊಳಿಸಿದ್ದು ಸದರಿ ನೋಟೀಸ್ ಖುದ್ದು ಜಾರಿಗೊಂಡಿದ್ದು ದಿನಾಂಕಃ23-08-2016 ರಂದು ನೀವು ಅಸಂಬದ್ಧ ಪ್ರತ್ಯುತ್ತರ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುತ್ತೀರಾ?**
**ಉತ್ತರಃ**

**ಪ್ರಶ್ನೆ ಃ5) ಈ ಮೊಕದ್ದಮೆಯ ಬಗ್ಗೆ ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯೇ?**
**ಉತ್ತರಃ**

**ಪ್ರಶ್ನೆ ಃ6) ನಿಮ್ಮ ಪರವಾಗಿ ಪ್ರತಿರಕ್ಷೆ ಸಾಕ್ಷ್ಯ ಇದೆಯೇ?**
**ಉತ್ತರಃ**

**(ಮೇಲ್ಕಂಡ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆತ ಕೊಟ್ಟ ಉತ್ತರಗಳನ್ನ ಯಥಾವತ್ತಾಗಿ ನನ್ನ ಸ್ವ ಹಸ್ತದಿಂದ ದಾಖಲು ಮಾಡಿಕೊಂಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ದಿನಾಂಕಃ06-08-2021** **ಮತ್ತು ಜೆಎಂಎಫ್‌ಸಿ., ಮಳವಳ್ಳಿ**